ಕಂದಾಯ ಇಲಾಖೆ

# ತಹಶೀಲ್ದಾರ್‌ರವರ ಕಾರ್ಯಾಲಯ ಮಡಿಕೇರಿ ತಾಲ್ಲೂಕು ಮಡಿಕೇರಿ

ದೂರವಾಣಿ ಸಂಖ್ಯೆ-ಕಛೇರಿ 08272-228396 PIN-571201 Email: thasildarmdkeln@gmail.com

ಸಂ/ತಮತ/ಭೂಪರಿ/ಮ/ಫಾ.ಹೌಸ್/65/2023-24 ದಿನಾಂಕ: 02/08/2023.

## ಅನುಮತಿ ಪತ್ರ

ವಿಷಯ: ಕೃಷಿ ಭೂಮಿಯಲ್ಲಿ ಫಾರ್ಮ್ ಹೌಸ್ ನಿರ್ಮಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1. ಅರ್ಜಿದಾರರಾದ ಪಡಿಯಟ್ಟೀರ.ಕೆ.ಉತ್ತಯ್ಯ, ಮಕ್ಕಂದೂರು ಗ್ರಾಮ ಇವರ ಮನವಿ ದಿನಾಂಕ:03/06/2023.

2 ಕರ್ನಾಟಕ ಸರ್ಕಾರ ಸಚಿವಾಲಯದ ಸುತ್ತೋಲೆ ಸಂಖ್ಯೆ:ಕಂ.ಇ./11/ಎಲ್.ಜಿ.ಪಿ./2018 ದಿನಾಂಕ:29/01/2018

3. ಕಂದಾಯ ಪರಿವೀಕ್ಷಕರು ಮಡಿಕೇರಿ ಹೋಬಳಿ ಇವರ ವರದಿ ಸಂಖ್ಯೆ: ಆರ್‌ಐಎಂ/ಭೂಪರಿ/ಫಾ.ಹೌ/86/2023-24 ದಿನಾಂಕ:12/07/2023.

********

ವಿಷಯಕ್ಕೆ ಸಂಬಂಧಿಸಿದಂತೆ, ಮಕ್ಕಂದೂರು ಗ್ರಾಮದ ಸ.ನಂ.150/2 ರಲ್ಲಿ 2.76 ಎಕ್ರೆ ಕೃಷಿ ಜಮೀನಿನನ್ನು ಹೊಂದಿದ್ದು ಸದರಿ ಜಮೀನಿನಲ್ಲಿ ಫಾರ್ಮ್ ಹೌಸ್ ನಿರ್ಮಿಸಲು ಅನುಮತಿ ನೀಡುವಂತೆ ಉಲ್ಲೇಖ(1) ರ ಮನವಿಯಲ್ಲಿ ಕೋರಿರುವುದಾಗಿದೆ.

ಅದರಂತೆ ಉಲ್ಲೇಖ(2) ರ ಕರ್ನಾಟಕ ಸರ್ಕಾರ ಸಚಿವಾಲಯದ ಸುತ್ತೋಲೆಯಂತೆ ಗರಿಷ್ಠ ಶೇಕಡಾ 10 ರಷ್ಟು ಜಮೀನಿನಲ್ಲಿ (ಬಿ ಖರಾಬು ಜಮೀನನ್ನು ಹೊರತುಪಡಿಸಿ) ಫಾರ್ಮ್ ಹೌಸ್ ನಿರ್ಮಿಸಲು ಅನುಮತಿಯನ್ನು ನೀಡುವ ಬಗ್ಗೆ ಉಲ್ಲೇಖ (3) ರಲ್ಲಿ ಕಂದಾಯ ಪರಿವೀಕ್ಷಕರು ಮಡಿಕೇರಿ ಹೋಬಳಿ ಇವರು ಅರ್ಜಿದಾರರು ಸದರಿ ಜಮೀನಿನ ಖಾತೆದಾರರಾಗಿರುತ್ತಾರೆ. ಆದ್ದರಿಂದ ಮೇಲ್ಕಾಣಿಸಿದ ಜಾಗದಲ್ಲಿ ಕೃಷಿ ಉಪಯೋಗಕ್ಕೆ ಬಳಸುವ ಉಪಕರಣಗಳನ್ನು ಇಟ್ಟುಕೊಳ್ಳುವ ಉದ್ದೇಶದಿಂದ ತೋಟದ ಮನೆ ನಿರ್ಮಾಣ ಮಾಡಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ವರದಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ 0.05 ಎಕ್ರೆ ಜಮೀನಿನಲ್ಲಿ ಫಾರ್ಮ್ ಹೌಸ್ ನಿರ್ಮಿಸಲು ಅನುಮತಿ ನೀಡಲಾಗಿದೆ.

ಷರತ್ತುಗಳು:

1. ಅನುಮತಿ ನೀಡಿದ ವಿಸ್ತೀರ್ಣದಲ್ಲಿ ಮಾತ್ರ ಫಾರ್ಮ್ ಹೌಸ್, ಬಾವಿ ಅಥವಾ ತೊಟ್ಟಿ ನಿರ್ಮಿಸುವುದು. ಹೆಚ್ಚುವರಿ ಜಮೀನನ್ನು ಉಪಯೋಗಿಸುವಂತಿಲ್ಲ.
2. ಫಾರ್ಮ್ ಹೌಸ್‌ನ್ನು ಕೃಷಿಕರ ಹಾಗು ಅವರ ಕುಟುಂಬದ ವಾಸ್ತವ್ಯಕ್ಕಾಗಿ ಹಾಗು ಕೃಷಿ ಸಲಕರಣೆಗಳನ್ನು ಇಟ್ಟುಕೊಳ್ಳುವ ಸಲುವಾಗಿ ಮಾತ್ರ ಉಪಯೋಗಿಸತಕ್ಕದು. ಬಾಡಿಗೆ ನೀಡುವುದಾಗಲೀ ಹಾಗು ಇತರೆ ವಾಣಿಜ್ಯ ಉದ್ದೇಶಕ್ಕಾಗಲೀ ಬಳಸುವಂತಿಲ್ಲ.
3. ಫಾರ್ಮ್ ಹೌಸ್, ಬಾವಿ ಅಥವಾ ತೊಟ್ಟಿಯ ವಿವರದ ಬಗ್ಗೆ ಪಹಣಿಗೆ ದಾಖಲಿಸಲು ಒಪ್ಪಿಗೆ ನೀಡುವುದು.
4. ಸದರಿ ನಿರ್ಮಾಣಕ್ಕೆ ಪ್ರತ್ಯೇಕವಾಗಿ ಗ್ರಾಮ ಪಂಚಾಯಿತಿ/ಮುನಿಸಿಪಾಲಿಟಿಯಲ್ಲಿ ಆಸ್ತಿ ಸಂಖ್ಯೆಯನ್ನು ರಚಿಸತಕ್ಕದಲ್ಲ.
5. ಫಾರ್ಮ್ ಹೌಸ್ ಭಾಗದ ಆಸ್ತಿಯನ್ನು ಯಾವುದೇ ವ್ಯವಹಾರ ಅಥವಾ ಮಾರಾಟ ಮಾಡಬೇಕಾದ ಸಂಧರ್ಭದಲ್ಲಿ ಅಥವಾ ಗ್ರಾಮ ಪಂಚಾಯಿತಿ/ಮುನಿಸಿಪಾಲಿಟಿಯಲ್ಲಿ ಆಸ್ತಿ ಸಂಖ್ಯೆಯನ್ನು ನೀಡಬೇಕಾದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ನಿಯಮ 95 ರಡಿ ಭೂ ಪರಿವರ್ತನೆಯ ಕಡ್ಡಾಯವಾಗಿರುತ್ತದೆ.
6. ಫಾರ್ಮ್ ಹೌಸ್, ಭಾವಿ ಅಥವಾ ತೊಟ್ಟಿ ಇತ್ಯಾದಿ ನಿರ್ಮಾಣವು ಇತರೆ ಸಂಬಂಧಿಸಿದ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟಿರುತ್ತದೆ.
7. ದೃಢೀಕರಣ ಪತ್ರವನ್ನು ಯಾವ ಉದ್ದೇಶಕ್ಕೆ ನೀಡಲಾಗಿರುತ್ತದೆಯೋ ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದು, ಇಲ್ಲದಿದ್ದಲ್ಲಿ ಅದೇಶವು (ಏಕಪಕ್ಷೀಯವಾಗಿ) ರದ್ದುಗೊಳ್ಳುತ್ತದೆ.
8. ಹೋಂ ಸ್ಟೇ ಅಥವಾ ರೆಸಾರ್ಟ್ ಉದ್ದೇಶಕ್ಕೆ ಉಪಯೋಗಿಸುವಂತಿಲ್ಲ.

### ಆಸ್ತಿಯ ವಿವರ

| ಕ್ರ.ಸಂ | ಹೋಬಳಿ | ಗ್ರಾಮ | ಸ.ನಂ | ಪಹಣಿಯಂತೆ ವಿಸ್ತೀರ್ಣ | ಅನುಮತಿ ನೀಡಿದ ವಿಸ್ತೀರ್ಣ |
|---|---|---|---|---|---|
| 1. | ಮಡಿಕೇರಿ | ಮಕ್ಕಂದೂರು | 150/2 | 2.76 ಎಕ್ರೆ | 0.05 ಎಕ್ರೆ |

ತಹಶೀಲ್ದಾರ್
ಮಡಿಕೇರಿ ತಾಲ್ಲೂಕು ಮಡಿಕೇರಿ.
ಕೊಡಗು ಜಿಲ್ಲೆ

ಇವರಿಗೆ,

ಪಡಿಯಟ್ಟೀರ.ಕೆ.ಉತ್ತಯ್ಯ,
ಮಕ್ಕಂದೂರು ಗ್ರಾಮ
ಮಡಿಕೇರಿ ಹೋಬಳಿ
ಮಡಿಕೇರಿ ತಾಲ್ಲೂಕು